P and SC No. 02/2017

RW 01 (ಶಿವರಾಮ್ ನಾಯಕ್)

ದಿನಾಂಕಃ 07.08.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ 2 ಮತ್ತು 3 ನೇ ಎದುರುದಾರರ ಪರ – ಶ್ರೀಮತಿ ಕೆ ಬಿ ಎಸ್ ವಕೀಲರಿಂದ.

ಕೆ ಎಸ್ ಚನ್ನಬಸಪ್ಪ ಅವರು ಸ್ವಯಂ ನಿವೃತ್ತಿ ಹೊಂದಿರುತ್ತಾರೆ, ಆ ಸಮಯದಲ್ಲಿ ಅವರಿಗೆ 58 ವರ್ಷ ವಯಸ್ಸಾಗಿರುತ್ತದೆ. ಅವರು ನಮ್ಮ ಇಲಾಖೆಯಲ್ಲಿ ಡಿ ಗ್ರೂಪ್ ನೌಕರರಾಗಿರುತ್ತಾರೆ. ಈ ಅರ್ಜಿಯಲ್ಲಿ ನಾನು 4 ನೇ ಎದುರುದಾರರ. 2 ಮತ್ತು 3 ನೇ ಎದುರುದಾರರು ಚನ್ನಬಸಪ್ಪ ಅವರ ಹೆಂಡತಿ ಮತ್ತು ಮಕ್ಕಳು ಎಂದರೆ ಹೌದು. ಅವರು ನಮ್ಮ ಇಲಾಖೆಗೆ ದಿಃ 27.06.2017 ರಂದು 2 ನೇ ಎದುರುದಾರರು ನಮ್ಮ ಇಲಾಖೆಗೆ ಮೃತರಿಗೆ ಬರಬೇಕಾಗಿದ್ದ ಹಣವನ್ನು ನೀಡಬೇಕಾಗಿ ಅರ್ಜಿಯನ್ನು ಸಲ್ಲಿಸಿರುತ್ತಾರೆ ಎಂದರೆ ಹೌದು. ಅದಕ್ಕೆ ತುಮ್ಮ ಸೇವಾ ಪುಸ್ತಕದಲ್ಲಿ ತುಮ್ಮ ಹೆಂಡತಿಯ ಹೆಸರು ನಮೂದಾಗಿಲ್ಲ ಎಂಬ ಉತ್ತರವನ್ನು ನೀಡಿರುತ್ತಾರೆ. ನಾವು ನೀಡಿರುವ ಹಿಂಬರಹವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಹಾಜರುಪಡಿಸಿರುತ್ತೇನೆ.

2 ನೇ ಎದುರುದಾರರು ಸಲ್ಲಿಸಿರುವ ಅರ್ಜಿಯೊಂದಿಗೆ ಹಡಗಲಿ ನ್ಯಾಯಾಲಯದಲ್ಲಿ ಸಲ್ಲಿಸಿರುವ ಜೀವನಾಂಶ ಅರ್ಜಿ ಹಾಗೂ 2 ನೇ ಎದುರುದಾರರ ಗಂಡ ಹೊಸಪೇಟೆಯ ನ್ಯಾಯಾಲಯದಲ್ಲಿ ವಿಚ್ಛೇದನಕ್ಕೆ ನೀಡಿದ್ದ ಅರ್ಜಿ ಹಾಗೂ ರಾಜಿ ಪತ್ರವನ್ನು ನೀಡಿದ್ದರು ಎಂದರೆ ಹೌದು. 1989 ರಲ್ಲಿ ಚನ್ನಬಸಪ್ಪ ಅವರು ವಾಣಿಜ್ಯ ತೆರಿಗೆ ಇಲಾಖೆಯಲ್ಲಿ ಜವಾನನಾಗಿ ನೇಮಕವಾಗಿದ್ದರು. ಆ ಸಮಯದಲ್ಲಿ ಅವರಿಗೆ ಮದುವೆಯಾಗದ ಕಾರಣ ಸೇವಾ ಪುಸ್ತಕದಲ್ಲಿ ಅವರ ತಾಯಿಯ ಹೆಸರನ್ನು ನಮೂದು ಮಾಡಿರುತ್ತಾರೆ ಎಂದರೆ ತಾಯಿಯ ಹೆಸರು ನಮೂದಾಗಿದೆ. ಚನ್ನಬಸಪ್ಪ ಅವರ ತಾಯಿ ಮೃತಪಟ್ಟಿರುತ್ತಾರೆ ಎಂದರೆ ಹೌದು. 2002 ರಲ್ಲಿ ಚನ್ನಬಸಪ್ಪರವರಿಗೂ 2 ನೇ ಎದುರುದಾರರಿಗೂ ಮದುವೆಯಾಗಿದ್ದು, ಅದನ್ನು ಸೇವಾ ಪುಸ್ತಕದಲ್ಲಿ ನಮೂದು ಮಾಡಿಲ್ಲ ಎಂದರೆ ನನಗೆ ಗೊತ್ತಿಲ್ಲ. ಮದುವೆಯಾಗದೇ ಇದ್ದಾಗ ಸರಕಾರಿ ನೌಕರರಿಗೆ ತಂದೆತಾಯಿಯ ಹೆಸರನ್ನು ನಮೂದು ಮಾಡುತ್ತಾರೆ ಎಂದರೆ ಸೇವಾ ಪುಸ್ತಕದಲ್ಲಿ ನೌಕರರು ನೀಡಿದ ಮಾಹಿತಿಯನ್ನು ನಮೂದು ಮಾಡುತ್ತಾರೆ. 2 ಮತ್ತು 3 ನೇ ಎದುರುದಾರರು ಚನ್ನಬಸಪ್ಪ ಅವರ ಕಾನೂನುಬದ್ಧ ವಾರಸುದಾರರು ಎಂದರೆ ನನಗೆ ಗೊತ್ತಿಲ್ಲ.

ಆದ ಕಾರಣ ಮೃತ ಚನ್ನಬಸಪ್ಪ ಅವರ ನಿವೃತ್ತಿಯ ನಂತರದ ಸೇವಾ ಸೌಲಭ್ಯ 2 ಮತ್ತು 3 ನೇ ಅರ್ಜಿದಾರರಿಗೆ ಬರಬೇಕು ಎಂದರೆ ಸೇವಾ ಪುಸ್ತಕದ ಆಧಾರದ ಮೇರೆಗೆ ಬರುತ್ತದೆ.

ಪಾಟೀ ಸವಾಲು ಮುಕ್ತಾಯ.

ಮರು ವಿಚಾರಣೆ ಇಲ್ಲ.

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,

ಕೂಡ್ಲಿಗಿ.